ಓಎಸ್ 125/2014

ಡಿಡಬ್ಲ್ಯೂ 2

**ಸಾಕ್ಷಿಯು ದಿಃ 20.06.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ 2(ಎ) ರಿಂದ (ಸಿ) ಪರ ವಕೀಲರಿಂದ**

ನನ್ನ ತಂದೆಯ ಹೆಸರು ಸುಬ್ಬಪ್ಪ ಮತ್ತು ನನ್ನ ತಂದೆಯ ತಂದೆಯ ಹೆಸರು ಸುಬ್ಬಪ್ಪವಾಗಿರುತ್ತದೆ. ನನ್ನ ತಾತ ಸುಬ್ಬಪ್ಪ ರವರಿಗೆ 3 ಜನ ಮಕ್ಕಳು, ಅವರುಗಳೆಂದರು ಕೊಂಗಳಪ್ಪ, ಸುಬ್ಬಪ್ಪ ಮತ್ತು ಬಸಪ್ಪವಾಗಿರುತ್ತಾರೆ. ವಾದಿಗಳು ಬಸಪ್ಪ ರವರ ಮಕ್ಕಳು ಎಂದರೆ ಸರಿ. ಕೊಂಗಳಪ್ಪ ರವರಿಗೆ 3 ಜನ ಮಕ್ಕಳು ಎಂದರೆ ಸರಿ. ಸದರಿ ಕೊಂಗಳಪ್ಪ ರವರಿಗೆ ಮಲ್ಲಪ್ಪ, ನಾಗರಾಜು ಮತ್ತು ಮಹದೇವಮ್ಮ ಮಕ್ಕಳಾಗಿರುತ್ತಾರೆ. ಕೊಂಗಳಪ್ಪ ರವರ ಮಗ ಮಲ್ಲಪ್ಪ ರವರ ಹೆಸರು ಕೊಂಗಳ್ಳಿ ಮಲ್ಲು ಎಂದರೆ ಸರಿ. ಕೊಂಗಳ್ಳಿ ಮಲ್ಲು ರವರ ಹೆಂಡತಿಯ ಹೆಸರು ಧ್ರಾಕ್ಷಾಯಿಣಿ ಎಂದರೆ ಸರಿ ಮತ್ತು ಅವರಿಗೆ ಇಬ್ಬರೂ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ.

2. ದಾವ ಐಟಂ ನಂಃ 2ನೇ ಸ್ವತ್ತು ನಿಮಗೆ ಸೇರಿದ್ದು ಎಂದು ಯಾವ ಆಧಾರದಲ್ಲಿ ಹೇಳಿದ್ದೀರಿ ಎಂದರೆ ಸಾಕ್ಷಿಯು ಸದರಿ ಸ್ವತ್ತು ನಮ್ಮ ಅಜ್ಜಿ ಬಸಮ್ಮ ರವರ ಅಣ್ಣ ಪುಟ್ಟಮಾದಪ್ಪ ರವರಿಗೆ ಸೇರಿದ್ದ ಆಸ್ತಿ, ಆದ್ದರಿಂದ ಹೇಳಿದ್ದೇನೆ ಎಂದು ನುಡಿಯುತ್ತಾರೆ. ಆ ಬಗ್ಗೆ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ದಾವ ಐಟಂ ನಂಃ 2ನೇ ಸ್ವತ್ತು ವಾದಿಗಳು ಮತ್ತು ನಮ್ಮ ಪಿತ್ರಾರ್ಜಿತ ಸ್ವತ್ತಾಗಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವ ಐಟಂ ನಂಃ 3ನೇ ಸ್ವತ್ತು ವಾದಿಗಳು ಮತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ದಾವ ಐಟಂ ನಂಃ 1, 4, 5 ಮತ್ತು 6ನೇ ಸ್ವತ್ತುಗಳು ಕೊಂಗಳಪ್ಪ ರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವ ಐಟಂ ನಂಃ 1, 4, 5 ಮತ್ತು 6ನೇ ಸ್ವತ್ತುಗಳು ಕೊಂಗಳಪ್ಪ ರವರ ಸ್ವಯಾರ್ಜಿತ ಸ್ವತ್ತುಗಳಾದ ಕಾರಣ ವಾದಿಗಳಿಗಾಗಲಿ ನಮಗಾಗಲಿ ಅವುಗಳ ಮೇಲೆ

ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವ ಐಟಂ ನಂಃ 1, 4, 5 ಮತ್ತು 6ನೇ ಸ್ವತ್ತುಗಳಲ್ಲಿ ಕೊಂಗಳಪ್ಪ ರವರ ಮಕ್ಕಳಿಗೆ ಮಾತ್ರ ಹಕ್ಕು ಇದೆ, ಮತ್ಯಾರಿಗೂ ಹಕ್ಕಿಲ್ಲ ಎಂದರೆ ಸರಿಯಲ್ಲ. ದಾವ ಐಟಂ ನಂಃ 1, 4, 5 ಮತ್ತು 6ನೇ ಸ್ವತ್ತುಗಳಲ್ಲಿ ಕೊಂಗಳಪ್ಪ ರವರ ಮಕ್ಕಳು ವಿಭಾಗ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ನಮ್ಮ ತಾತನ ಆಸ್ತಿಗಳನ್ನು ಮೋಸದಿಂದ ವಿಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಕೊಂಗಳಪ್ಪ ರವರ ಸ್ವಯಾರ್ಜಿತ ಆಸ್ತಿಗಳನ್ನು ಅವರ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ, ಯಾವುದೇ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ಆ ಎಲ್ಲ ವಿಚಾರಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸ**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ